ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು-62/2025-26/112 ದಿನಾಂಕ: 14 NOV 2025

## :: ಸಿಂಡಿಕೇಟ ಸಭೆಯ ನಡಾವಳಿಗಳು ::

ಕರ್ನಾಟಕ ವಿಶ್ವವಿದ್ಯಾಲಯದ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು **ದಿನಾಂಕ 05ನೇ ನವೆಂಬರ, 2025 ರಂದು ಮುಂಜಾನೆ 11:30 ಗಂಟೆಗೆ** ಸಿಂಡಿಕೇಟ ಸಭೆಯನ್ನು ಕವಿವಿ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**ಸಿಂಡಿಕೇಟ ಸಭೆಗೆ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:**

| | | |
|---|---|---|
| 1) | ಪ್ರೊ. ಐರಾನಿ ಮೊಹಮ್ಮದ್ ಖಾನ್, ಕುಲಪತಿಗಳು, ಕ.ವಿ.ವಿ. ಧಾರವಾಡ | ಅಧ್ಯಕ್ಷರು |
| 2) | ಡಾ(ಶ್ರೀಮತಿ). ಕರೀಮುನ್ನಿಸ್ಸಾ ಸಯ್ಯದ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 3) | ಡಾ. ಅರವಿಂದ ಎ. ಮೂಲಿಮನಿ, ಡೀನರು | ಸದಸ್ಯರು |
| 4) | ಶ್ರೀಮತಿ. ಅಂಜನಾ ಎಸ್. ಬಸನಗೌಡರ, ಹುಬ್ಬಳ್ಳಿ | ಸದಸ್ಯರು |
| 5) | ಶ್ರೀಮತಿ. ರತ್ನಾ ಪಾಟೀಲ, ಧಾರವಾಡ | ಸದಸ್ಯರು |
| 6) | ಡಾ. ಲಿಂಗರಾಜ ಸಿ. ಮುಳ್ಳಳ್ಳಿ, ಪ್ರಾಚಾರ್ಯರು, ಹುಬ್ಬಳ್ಳಿ | ಸದಸ್ಯರು |
| 7) | ಡಾ.(ಶ್ರೀಮತಿ). ಎನ್. ಸಿ. ಪಾಟೀಲ, ಪ್ರಾಚಾರ್ಯರು, ಧಾರವಾಡ | ಸದಸ್ಯರು |
| 8) | ಡಾ. ಬಿ. ಬಿ. ಹೊಳಗುಂದಿ, ಪ್ರಾಚಾರ್ಯರು, ಗದಗ | ಸದಸ್ಯರು |
| 9) | ಡಾ. ಬಿ. ಎಲ್. ಗುಂಡೂರ, ಪ್ರಾಚಾರ್ಯರು, ದಾಂಡೇಲಿ | ಸದಸ್ಯರು |
| 10) | ಶ್ರೀ. ಮಹೇಶ ವಾಯ್. ಹುಲೇನ್ನವರ, ಧಾರವಾಡ | ಸದಸ್ಯರು |
| 11) | ಶ್ರೀ. ರಾಬರ್ಟ ದದ್ದಾಪುರಿ, ಧಾರವಾಡ | ಸದಸ್ಯರು |
| 12) | ಡಾ. ಬಸವರಾಜ ಗೊರವರ, ಕುಂದಗೋಳ | ಸದಸ್ಯರು |
| 13) | ಡಾ. ಶಿವಾನಂದ ವಿ. ನಾಯಕ, ಅಂಕೋಲಾ | ಸದಸ್ಯರು |
| 14) | ಶ್ರೀ. ಶ್ಯಾಮ್ ಮಲ್ಲನಗೌಡರ, ಧಾರವಾಡ | ಸದಸ್ಯರು |
| 15) | ಡಾ. ಶೌಖತ್ ಅಜೀಮ್, ಹಿರಿಯ ಪ್ರಾಧ್ಯಾಪಕರು | ಸದಸ್ಯರು |
| 16) | ಡಾ. ಎನ್. ವಾಯ್. ಮಟ್ಟಿಹಾಳ, ಕುಲಸಚಿವರು(ಮೌಲ್ಯಮಾಪನ), ಕ.ವಿ.ವಿ. ಧಾರವಾಡ | ಸದಸ್ಯರು |
| 17) | ಶ್ರೀ. ಪ್ರದೀಪಕುಮಾರ, ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ | ವಿಶೇಷ ಆಹ್ವಾನಿತರು |
| 18) | ಡಾ. ಶಂಕರ ವನಿಕ್ಯಾಳ, ಕೆಎಎಸ್, ಕುಲಸಚಿವರು(ಆಡಳಿತ). ಕ.ವಿ.ವಿ. ಧಾರವಾಡ | ಸದಸ್ಯ ಕಾರ್ಯದರ್ಶಿಗಳು |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಸದಸ್ಯರುಗಳು ಇರುವುದನ್ನು ಖಚಿತಪಡಿಸಿಕೊಂಡು ಅಂದರೆ 18 ಜನ ಸದಸ್ಯರುಗಳು (01 ಸದಸ್ಯರು ಆನ್‌ಲೈನ್ ಮತ್ತು 17 ಸದಸ್ಯರು ಖುದ್ದು ಹಾಜರಿರುವುದನ್ನು) ಖಚಿತಪಡಿಸಿಕೊಂಡು ಮುಂಜಾನೆ 11:00 ಗಂಟೆಗೆ ನಿಗದಿಪಡಿಸಿದ ಸಭೆಯನ್ನು ಕಾರಣಾಂತರದಿಂದ 11:30 ಗಂಟೆಗೆ ಪ್ರಾರಂಭಿಸಲಾಯಿತು.

-
-
-
-
-
-
-

ಕುಲಸಚಿವರು



ಕುಲಪತಿಗಳು

## ದಿನಾಂಕ 05.11.2025 ರಂದು ಜರುಗಿದ ಸಾಧಾರಣ ಸಿಂಡಿಕೇಟ ಸಭೆ

**ಮಾನ್ಯ ಕುಲಪತಿಗಳಿಂದ ಪ್ರಾರಂಭ:**

**ಕರ್ನಾಟಕ ವಿಶ್ವವಿದ್ಯಾಲಯದ ಸಂಯೋಜಿತ ಮಹಾವಿದ್ಯಾಲಯದ ಪ್ರಾಚಾರ್ಯರನ್ನು ಸದಸ್ಯರೆಂದು ಸ್ವಾಗತಿಸುವುದು.**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1)(ಎಫ್) ರ ಅಡಿಯಲ್ಲಿ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಚಾರ್ಯರ ಜೇಷ್ಠತೆಯ ಅನುಗುಣವಾಗಿ **ಡಾ. ಬಿ. ಎಲ್. ಗುಂಡೂರ, ಪ್ರಾಚಾರ್ಯರು, ಬಂಗೂರನಗರ ಕಲಾ, ವಿಜ್ಞಾನ & ವಾಣಿಜ್ಯ ಮಹಾವಿದ್ಯಾಲಯ, ದಾಂಡೇಲಿ** ಇವರನ್ನು ಸಿಂಡಿಕೇಟ ಸಭೆಗೆ ಸದಸ್ಯರೆಂದು ನಾಮನಿರ್ದೇಶನ ಮಾಡಲಾಗಿದ್ದು ಇವರಿಗೆ ಸಿಂಡಿಕೇಟ ಸಭೆಗೆ ತುಂಬು ಹೃದಯದಿಂದ ಸ್ವಾಗತ ಕೋರಲಾಯಿತು.

**ಸಿಂಡಿಕೇಟ ಸದಸ್ಯರ ಸದಸ್ಯತ್ವದ ಅವಧಿ ಕೊನೆಗೊಂಡ ಪ್ರಯುಕ್ತ ವಂದನೆ.**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1)(ಎಫ್) ರ ಅಡಿಯಲ್ಲಿ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಚಾರ್ಯರ ಜೇಷ್ಠತೆಯ ಅನುಸಾರ ಸಿಂಡಿಕೇಟ ಸದಸ್ಯರೆಂದು ನಾಮನಿರ್ದೇಶನಗೊಂಡಿದ್ದ **ಡಾ. ಎಚ್. ಎಚ್. ಭಟ್, ಪ್ರಾಚಾರ್ಯರು, ಬಿಜಿವಿಎಸ್ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸದಾಶಿವಗಡ** ಇವರ ಸಿಂಡಿಕೇಟ ಸದಸ್ಯತ್ವ ದಿನಾಂಕ: **31.10.2025** ರಂದು ಕೊನೆಗೊಂಡಿದ್ದು, ವಿಶ್ವವಿದ್ಯಾಲಯದ ಹಾಗೂ ಸಿಂಡಿಕೇಟ ಸದಸ್ಯರುಗಳ ಪರವಾಗಿ ವಿಶ್ವವಿದ್ಯಾಲಯದ ಅಭಿವೃದ್ಧಿಗಾಗಿ ನೀಡಿದ ಅಮೂಲ್ಯ ಸಲಹೆ, ಸೂಚನೆ ಹಾಗೂ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು.

-
-
-
-
-
-
-
-
-
-
-
-

ಕುಲಸಚಿವರು



ಕುಲಪತಿಗಳು

| | | |
|---|---|---|
| 1) | ವಿಷಯ | ದಿನಾಂಕ 31.07.2025 ರ ಸಾಮಾನ್ಯ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿ. |
| | ನಿರ್ಣಯ | **ದಿನಾಂಕ. 31.07.2025 ರ ಸಾಮಾನ್ಯ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯನ್ನು ವಿವರಿಸಲಾಯಿತು.** |
| | ವಿಷಯ | ದಿನಾಂಕ 10.09.2025 ರ ಸಾಮಾನ್ಯ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವ ಕುರಿತು. |
| | ನಿರ್ಣಯ | **ದಿನಾಂಕ 10.09.2025 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ ಸಭೆಯಲ್ಲಿ, ದಿನಾಂಕ 31.07.2025 ರಂದು ಜರುಗಿದ ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ:34 ತಿದ್ದುಪಡಿಗೊಂಡಿದ್ದು ಸದರಿ ನಿರ್ಣಯಕ್ಕೆ ಅಸಮ್ಮತಿ ವ್ಯಕ್ತಪಡಿಸಿ ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಸಿಂಡಿಕೇಟ ಇವರು ಭಿನ್ನಾಭಿಪ್ರಾಯ ಪತ್ರವನ್ನು (Note of Dissent) ದಿನಾಂಕ: 05.11.2025ರ ಸಭೆಯಲ್ಲಿ ಸಲ್ಲಿಸಿರುತ್ತಾರೆ.**<br><br>**ಸದರಿ ಭಿನ್ನಾಭಿಪ್ರಾಯ ಪತ್ರವನ್ನು (Note of Dissent) ಈ ನಡಾವಳಿಯೊಂದಿಗೆ ಲಗತ್ತಿಸಿದೆ.**<br><br>**ಮುಂದುವರೆದು, ದಿನಾಂಕ 10.09.2025 ರಂದು ಜರುಗಿದ ಸಾಮಾನ್ಯ ಸಿಂಡಿಕೇಟ ಸಭೆಯ ನಡುವಳಿಗಳನ್ನು ದೃಢೀಕರಿಸುವಾಗ ದಿನಾಂಕ: 31.07.2025 ರಂದು ಜರುಗಿದ ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ:34ಕ್ಕೆ ಸದಸ್ಯ ಕಾರ್ಯದರ್ಶಿಗಳು ನೀಡಿದ ಭಿನ್ನಾಭಿಪ್ರಾಯ ಪತ್ರವನ್ನು (Note of Dissent) ನೀಡಿದರು. ಮಾನ್ಯ ಕುಲಪತಿಗಳು ಈ ಬಗ್ಗೆ ಮಾತನಾಡಿ ಸ್ಪಷ್ಟೀಕರಣ ನೀಡಿದರು. ಆದರೂ, ಮಾನ್ಯ ಕುಲಸಚಿವರು Note of Dissent ಕೊಟ್ಟಿರುವುದನ್ನು ಗಮನಿಸಲಾಯಿತು. ಸಿಂಡಿಕೇಟ ಸದಸ್ಯರು ಈ ಬಗ್ಗೆ ಚರ್ಚಿಸಿ ಎಲ್ಲ ನಡುವಳಿಗಳನ್ನು ಬಹುಮತದಿಂದ ದೃಢೀಕರಿಸಿತು.** |
| 2) | ವಿಷಯ : | ದಿ: 03-09-2025 ರಂದು ಜರುಗಿದ ಆದಿಕವಿ ಪಂಪ ಅಧ್ಯಯನ ಪೀಠದ ಸಲಹಾ ಸಮಿತಿಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯ ಅನುಮೋಧನೆ ಕುರಿತು |
| | <u>ನಿರ್ಣಯ</u> | **ದಿನಾಂಕ. 03-09-2025 ರಂದು ಜರುಗಿದ ಆದಿಕವಿ ಪಂಪ ಅಧ್ಯಯನ ಪೀಠದ ಸಲಹಾ ಸಮಿತಿಯ ನಡಾವಳಿಗಳನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋಧಿಸಿತು.** |
| 3) | ವಿಷಯ : | 2025-26 ನೇ ಸಾಲಿಗೆ ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ಶೈಕ್ಷಣಿಕ, ಆಡಳಿತಾತ್ಮಕ ವಿಭಾಗಗಳಿಗೆ, ಘಟಕ ಮಹಾವಿದ್ಯಾಲಯಗಳಿಗೆ ಹಾಗೂ ಕ.ವಿ.ವಿ ಸ್ನಾತಕೋತ್ತರ ಕೇಂದ್ರಗಳಾದ ಕಾರವಾರ ಮತ್ತು ಗದಗದಲ್ಲಿ ಭದ್ರತಾ ಹೊರಗುತ್ತಿಗೆ ಸಿಬ್ಬಂದಿಗಳನ್ನು ಪೂರೈಸುವ ಸಲುವಾಗಿ 11 ತಿಂಗಳ ಅವಧಿಗೆ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರಮೆಂಟ್ ಮುಖಾಂತರ ಇ-ಟೆಂಡರ್ ಕರೆಯುವ ಕುರಿತು. |
| | <u>ನಿರ್ಣಯ</u> | **2025-26 ನೇ ಸಾಲಿಗೆ ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ಶೈಕ್ಷಣಿಕ, ಆಡಳಿತಾತ್ಮಕ ವಿಭಾಗಗಳಿಗೆ, ಘಟಕ ಮಹಾವಿದ್ಯಾಲಯಗಳಿಗೆ ಹಾಗೂ ಕ.ವಿ.ವಿ ಸ್ನಾತಕೋತ್ತರ ಕೇಂದ್ರಗಳಾದ ಕಾರವಾರ ಮತ್ತು ಗದಗದಲ್ಲಿ ಭದ್ರತಾ ಹೊರಗುತ್ತಿಗೆಯ ಅಂದಾಜು 91 ಸಿಬ್ಬಂದಿಗಳನ್ನು ಅಗತ್ಯಕ್ಕನುಗುಣವಾಗಿ ಈ ಸಂಖ್ಯೆಗಿಂತ ಹೆಚ್ಚಿಗೆ ಅಥವಾ ಕಡಿಮೆ ಪೂರೈಸುವ ಷರತ್ತಿಗೊಳಪಟ್ಟು 11 ತಿಂಗಳ ಅವಧಿಗೆ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರಮೆಂಟ್ ಮುಖಾಂತರ ಇ-ಟೆಂಡರ್ ಕರೆಯುವ ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.**<br><br>**ಮುಂದುವರೆದು, ಕಡ್ಡಾಯವಾಗಿ ನಿಯಮಗಳನ್ನು ಪಾಲಿಸಲು ಸೂಚಿಸಲಾಯಿತು.** |



ಕುಲಸಚಿವರು

ಕುಲಪತಿಗಳು

| | | |
|---|---|---|
| 4) | ವಿಷಯ : | 2025-26 ನೇ ಸಾಲಿಗೆ ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ಶೈಕ್ಷಣಿಕ, ಆಡಳಿತಾತ್ಮಕ ವಿಭಾಗಗಳಿಗೆ, ಘಟಕ ಮಹಾವಿದ್ಯಾಲಯಗಳಿಗೆ ಹಾಗೂ ಕ.ವಿ.ವಿ ಸ್ನಾತಕೋತ್ತರ ಕೇಂದ್ರಗಳಾದ ಕಾರವಾರ ಮತ್ತು ಗದಗದಲ್ಲಿ ಗ್ರುಪ್ "ಸಿ" ಹೊರಗುತ್ತಿಗೆ ಸಿಬ್ಬಂದಿಗಳನ್ನು ಪೂರೈಸುವ ಸಲುವಾಗಿ 11 ತಿಂಗಳ ಅವಧಿಗೆ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರಮೆಂಟ್ ಮುಖಾಂತರ ಇ-ಟೆಂಡರ್ ಕರೆಯುವ ಕುರಿತು. |
| <u>ನಿರ್ಣಯ</u> | | **2025-26 ನೇ ಸಾಲಿಗೆ ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ಶೈಕ್ಷಣಿಕ, ಆಡಳಿತಾತ್ಮಕ ವಿಭಾಗಗಳಿಗೆ, ಘಟಕ ಮಹಾವಿದ್ಯಾಲಯಗಳಿಗೆ ಹಾಗೂ ಕ.ವಿ.ವಿ ಸ್ನಾತಕೋತ್ತರ ಕೇಂದ್ರಗಳಾದ ಕಾರವಾರ ಮತ್ತು ಗದಗದಲ್ಲಿ ಗ್ರುಪ್ "ಸಿ" ಹೊರಗುತ್ತಿಗೆಯ ಅಂದಾಜು 186 ಹೆಚ್ಚು/ಕಡಿಮೆ ಸಿಬ್ಬಂದಿಗಳನ್ನು ಅಗತ್ಯಕ್ಕನುಗುಣವಾಗಿ ಪೂರೈಸುವ ಸಲುವಾಗಿ 11 ತಿಂಗಳ ಅವಧಿಗೆ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರಮೆಂಟ್ ಮುಖಾಂತರ ಇ-ಟೆಂಡರ್ ಕರೆಯುವ ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.**<br>**ಮುಂದುವರೆದು, ಕಡ್ಡಾಯವಾಗಿ ನಿಯಮಗಳನ್ನು ಪಾಲಿಸಲು ಸೂಚಿಸಲಾಯಿತು.** |
| 5) | ವಿಷಯ : | 2025-26 ನೇ ಸಾಲಿಗೆ ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ಶೈಕ್ಷಣಿಕ, ಆಡಳಿತಾತ್ಮಕ ವಿಭಾಗಗಳಿಗೆ, ಘಟಕ ಮಹಾವಿದ್ಯಾಲಯಗಳಿಗೆ ಹಾಗೂ ಕ.ವಿ.ವಿ ಸ್ನಾತಕೋತ್ತರ ಕೇಂದ್ರಗಳಾದ ಕಾರವಾರ ಮತ್ತು ಗದಗದಲ್ಲಿ ಗ್ರುಪ್ "ಡಿ" ಹೊರಗುತ್ತಿಗೆ ಸಿಬ್ಬಂದಿಗಳನ್ನು ಪೂರೈಸುವ ಸಲುವಾಗಿ 11 ತಿಂಗಳ ಅವಧಿಗೆ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರಮೆಂಟ್ ಮುಖಾಂತರ ಇ-ಟೆಂಡರ್ ಕರೆಯುವ ಕುರಿತು. |
| <u>ನಿರ್ಣಯ</u> | | **2025-26 ನೇ ಸಾಲಿಗೆ ಕರ್ನಾಟಕ ವಿಶ್ವವಿದ್ಯಾಲಯದ ವಿವಿಧ ಶೈಕ್ಷಣಿಕ, ಆಡಳಿತಾತ್ಮಕ ವಿಭಾಗಗಳಿಗೆ, ಘಟಕ ಮಹಾವಿದ್ಯಾಲಯಗಳಿಗೆ ಹಾಗೂ ಕ.ವಿ.ವಿ ಸ್ನಾತಕೋತ್ತರ ಕೇಂದ್ರಗಳಾದ ಕಾರವಾರ ಮತ್ತು ಗದಗದಲ್ಲಿ ಗ್ರುಪ್ "ಡಿ" ಹೊರಗುತ್ತಿಗೆಯ ಅಂದಾಜು 292 ಹೆಚ್ಚು/ಕಡಿಮೆ ಸಿಬ್ಬಂದಿಗಳನ್ನು ಅಗತ್ಯಕ್ಕನುಗುಣವಾಗಿ ಪೂರೈಸುವ ಸಲುವಾಗಿ 11 ತಿಂಗಳ ಅವಧಿಗೆ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರಮೆಂಟ್ ಮುಖಾಂತರ ಇ-ಟೆಂಡರ್ ಕರೆಯುವ ಪ್ರಸ್ತಾವನೆಯನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.**<br>**ಮುಂದುವರೆದು, ಕಡ್ಡಾಯವಾಗಿ ನಿಯಮಗಳನ್ನು ಪಾಲಿಸಲು ಸೂಚಿಸಲಾಯಿತು.** |
| 6) | ವಿಷಯ : | ಸ್ನಾತಕೋತ್ತರ ವ್ಯವಹಾರ ಅಧ್ಯಯನ ವಿಭಾಗಕ್ಕೆ ಮುಖ್ಯಸ್ಥರನ್ನು ನೇಮಕ ಮಾಡಿ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು. |
| <u>ನಿರ್ಣಯ</u> | | **ಡಾ. ಯು. ಎಮ್. ಕಿನಂಗೆ, ಹಿರಿಯ ಪ್ರಾಧ್ಯಾಪಕರು ಇವರನ್ನು ಸ್ನಾತಕೋತ್ತರ ವ್ಯವಹಾರ ಅಧ್ಯಯನ ವಿಭಾಗಕ್ಕೆ ಮುಖ್ಯಸ್ಥರನ್ನಾಗಿ ನೇಮಕ ಮಾಡಿ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.** |
| 7) | ವಿಷಯ : | ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗದಿಂದ ಸ್ವೀಕೃತವಾದ ನಿಯಮಾವಳಿ/ ಪರಿನಿಯಮಾವಳಿಗಳನ್ನು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸುವ ಕುರಿತು ಪರಿಶೀಲನೆಗಾಗಿ ಸಿಂಡಿಕೇಟ್ ಸಭೆಯ ಕಾರ್ಯಸೂಚಿ. |
| <u>ನಿರ್ಣಯ</u> | | **ವಿಶ್ವವಿದ್ಯಾಲಯದ ವಿದ್ಯಾಮಂಡಳ ವಿಭಾಗದಿಂದ ಸ್ವೀಕೃತವಾದ ನಿಯಮಾವಳಿ/ ಪರಿನಿಯಮಾವಳಿಗಳನ್ನು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸುವ ಕುರಿತು ಪರಿಶೀಲಿಸಲಾಗಿ ಈಗಾಗಲೇ ದಿನಾಂಕ 12 ಹಾಗೂ 13ನೇ ಮೇ, 2025 ರಂದು ಜರುಗಿದ ಸಿಂಡಿಕೇಟ ಸಭೆಯ ನಿರ್ಣಯದಂತೆ 779 ಪುಟಗಳ ಜೊತೆಗೆ ಹೆಚ್ಚುವರಿಯಾಗಿ 107 ಒಟ್ಟು 899 ಪುಟಗಳನ್ನು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸಲು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಮತ್ತು ಇಂಗ್ಲೀಷ್ ವಿಭಾಗದ ಪ್ರಸ್ತುತ ಮತ್ತು.....** |



ಕುಲಸಚಿವರು

ಕುಲಪತಿಗಳು

| | | |
|---|---|---|
| | | **......ನಿವೃತ್ತ ಪ್ರಾಧ್ಯಾಪಕರುಗಳಿಂದ ಭಾಷಾಂತರಗೊಳಿಸಲು ಸಮಿತಿ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು.** |
| **8)** | **ವಿಷಯ :** | Ratification of the action taken by the Hon`ble Vice-Chancellor for having permitted and sanctioned ***Commuted leave*** to ***Dr.S.G.Chalawadi,*** Professor, P G Department of Studies in ***Ancient Indian History & Epigraphy,*** K U Dharwad to visit ***Malaysia*** along with his family members as a personal tour during the period from ***06.10.2025 to 11.10.2025.*** |
| **ನಿರ್ಣಯ** | | The Syndicate resolved to ratify the action taken for having permitted and sanctioned ***Commuted leave*** to ***Dr.S.G.Chalawadi,*** Professor, P G Department of Studies in ***Ancient Indian History & Epigraphy,*** K U Dharwad to visit ***Malaysia*** along with his family members as a personal tour during the period from ***06.10.2025 to 11.10.2025.*** |
| **9)** | **ವಿಷಯ :** | ಡಾ. ಎಸ್. ಬಿ. ನಾರಿ, ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇವರು ದಿನಾಂಕ:01.01.2020 ರಿಂದ 18.07.2025ರ ವರೆಗಿನ ಅವಧಿಯಲ್ಲಿ ಹೆಚ್ಚುವರಿಯಾಗಿ ತೆಗೆದುಕೊಂಡ ರಜೆಗಳನ್ನು ವೇತನ ರಹಿತ ರಜೆಗಳೆಂದು ಪರಿಗಣಿಸಿ, ಸದರ ವೇತನ ರಹಿತ ರಜೆಗಳಿಗೆ ಸಂವಾದಿಯಾದ ವೇತನವನ್ನು ಮುರಿದುಕೊಳ್ಳುವ ಕುರಿತು ಹಾಗೂ ಸದರಿಯವರು ದಿನಾಂಕ:25.09.2025, 26.09.2025, 27.09.2025, 29.09.2025, 30.09.2025, 03.10.2025, 04.10.2025, 08.10.2025, 09.10.2025, 10.10.2025 ಮತ್ತು 11.10.2025 ವಿಭಾಗಕ್ಕೆ ಯಾವುದೇ ರೀತಿಯ ಮಾಹಿತಿಯನ್ನು ನೀಡದೇ ಗೈರು ಆಗಿರುತ್ತಾರೆ ಎಂದು ಅಧ್ಯಕ್ಷರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕ.ವಿ.ವಿ.ಧಾರವಾಡ ಇವರು ದಿನಾಂಕ: 04.10.2025 ಹಾಗೂ 11.10.2025ರ ಪತ್ರಗಳ ಮೂಲಕ ತಿಳಿಸಿರುವ ವಿಷಯವನ್ನು ಪರಿಶೀಲಿಸುವ ಕುರಿತು. |
| **ನಿರ್ಣಯ** | | **ಡಾ. ಎಸ್. ಬಿ. ನಾರಿ, ಸಹ ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ ಇವರು ವಿಭಾಗಕ್ಕೆ ಯಾವುದೇ ರೀತಿಯ ಮಾಹಿತಿಯನ್ನು ನೀಡದೇ ಗೈರು ಆಗಿರುತ್ತಾರೆ ಎಂದು ಅಧ್ಯಕ್ಷರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಕ.ವಿ.ವಿ.ಧಾರವಾಡ ಇವರು ದಿನಾಂಕ: 04.10.2025 ಹಾಗೂ 11.10.2025ರ ಪತ್ರಗಳ ಮೂಲಕ ತಿಳಿಸಿರುವ ವಿಷಯವನ್ನು ಕೆಲವೊಂದು ಮಾಹಿತಿಗಳನ್ನು ಕಲೆಹಾಕುವ ಕುರಿತು ಸದರ ವಿಷಯವನ್ನು ಮುಂದೂಡಲಾಯಿತು.** |
| **10)** | **ವಿಷಯ :** | ಡಾ.ಪಿ.ಜಿ.ಮುತಾಲಿಕ ದೇಸಾಯಿ, ಸ್ಥಾನಿಕ ವೈದ್ಯಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರ, ಧಾರವಾಡ ಇವರ ಸಂಚಿತ ವೇತನ ಪರಿಷ್ಕರಿಸುವ ಪ್ರಸ್ತಾವನೆಯನ್ನು ಆಡಳಿತ ಮಂಡಳಿ ಸಭೆಯ ಮುಂದೆ ಪರಿಶೀಲಿಸುವ ಕುರಿತು |
| **ನಿರ್ಣಯ** | | **ಡಾ.ಪಿ.ಜಿ.ಮುತಾಲಿಕ ದೇಸಾಯಿ, ಸ್ಥಾನಿಕ ವೈದ್ಯಾಧಿಕಾರಿಗಳು, ಕರ್ನಾಟಕ ವಿಶ್ವವಿದ್ಯಾಲಯದ ಆರೋಗ್ಯ ಕೇಂದ್ರ, ಧಾರವಾಡ ಇವರ ಸಂಚಿತ ವೇತನ ಪರಿಷ್ಕರಿಸುವ ಪ್ರಸ್ತಾವನೆಯ ಕುರಿತು ಸುಧೀರ್ಘವಾಗಿ ಚರ್ಚಿಸಲಾಗಿ ಈ ಹಿಂದೆ ಬೇರೆ ವೈದ್ಯಾಧಿಕಾರಿಯನ್ನು ನೇಮಿಸಲು ಅಧಿಸೂಚನೆಯನ್ನು ಹೊರಡಿಸಲಾಗಿ ಒಂದು ಅರ್ಜಿ ಮಾತ್ರ ಸ್ವೀಕೃರಿಸಲಾಗಿದ್ದು, ಅರ್ಹ ವೈದ್ಯಾಧಿಕಾರಿಗಳು ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂಬ ಅಂಶವನ್ನು ಪರಿಗಣಿಸಲಾಗಿ ಮತ್ತು ಸದರಿಯವರ ಸೇವೆಯು ವಿದ್ಯಾರ್ಥಿಗಳ ಹಾಗೂ ಸಿಬ್ಬಂದಿಗಳ ಹಿತದೃಷ್ಠಿಯಿಂದ ಅತ್ಯವಶ್ಯವಾಗಿರುವುದರಿಂದ ಸಧ್ಯ ಸದರಿಯವರಿಗೆ ನೀಡಲಾಗುತ್ತಿರುವ ಸಂಚಿತ ವೇತನ ರೂ.40,000/- ಗಳಿಗೆ ರೂ.5000/- ಗಳನ್ನು ಹೆಚ್ಚಿಸಿ ಪ್ರತಿ ತಿಂಗಳು ಒಟ್ಟು ರೂ.45,000/- ರಂತೆ ಸಂಚಿತ ವೇತನ ಪರಿಷ್ಕರಿಸಲು ಸಿಂಡಿಕೇಟ ಅನುಮೋದಿಸಿತು.** |



ಕುಲಸಚಿವರು

ಕುಲಪತಿಗಳು

| | | |
|---|---|---|
| 11) | ವಿಷಯ : | ಗೌರವಾನ್ವಿತ ಕುಲಾಧಿಪತಿಗಳಿಂದ ಒಪ್ಪಿತಗೊಂಡ ಅನುಶಾಸನದ ಪ್ರಕಾರ ನಿವೃತ್ತ ಜಿಲ್ಲಾ ನ್ಯಾಯಾಧೀಶರೊಬ್ಬರನ್ನು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಾಗಿ ನೇಮಕಾತಿ ಮಾಡುವ ವಿಷಯದ ಪ್ರಸ್ತಾವನೆಯ ಪರಿಶೀಲನೆ ಕುರಿತು. |
| ನಿರ್ಣಯ | | **ಗೌರವಾನ್ವಿತ ಕುಲಾಧಿಪತಿಗಳಿಂದ ಒಪ್ಪಿತಗೊಂಡ ಅನುಶಾಸನದ ಪ್ರಕಾರ ನಿವೃತ್ತ ಜಿಲ್ಲಾ ನ್ಯಾಯಾಧೀಶರೊಬ್ಬರನ್ನು ವಿಶ್ವವಿದ್ಯಾಲಯದ ಕಾನೂನು ಸಲಹೆಗಾರರಾಗಿ ನೇಮಕಾತಿ ಮಾಡುವ ವಿಷಯದ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ್ ಸಭೆಯು ವಿಶ್ವವಿದ್ಯಾಲಯದಲ್ಲಿ ಇರುವ ವಕೀಲರ ಪಟ್ಟಿಯನ್ನು ಪರಿಷ್ಕರಿಸಲು ಮತ್ತು ಕಾನೂನು ಕೋಶದ ಸಲಹೆಗಾರರನ್ನು ನೇಮಿಸಲು ಈ ಕೆಳಕಂಡ ಸಮಿತಿಯನ್ನು ರಚಿಸಿದ್ದು, ವರದಿಯನ್ನು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ನಿರ್ಣಯಿಸಿತು.** |

| | | |
|---|---|---|
| **1** | **ಡಾ. ಎ. ಎ. ಮೂಲಿಮನಿ, ಸಿಂಡಿಕೇಟ್ ಸದಸ್ಯರು ಹಾಗೂ ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಖಾಯ** | **ಅಧ್ಯಕ್ಷರು** |
| **2** | **ಶ್ರೀಮತಿ. ಅಂಜನಾ ಬಸನಗೌಡರ, ಸಿಂಡಿಕೇಟ್ ಸದಸ್ಯರು** | **ಸದಸ್ಯರು** |
| **3** | **ಶ್ರೀಮತಿ. ರತ್ನಾ ಪಾಟೀಲ, ಸಿಂಡಿಕೇಟ್ ಸದಸ್ಯರು** | **ಸದಸ್ಯರು** |
| **4** | **ಡಾ. ಬಸವರಾಜ ಗೊರವರ, ಸಿಂಡಿಕೇಟ್ ಸದಸ್ಯರು** | **ಸದಸ್ಯರು** |
| **5** | **ಡಾ. ಶೌಖತ್ ಅಝೀಮ್, ಹಿರಿಯ ಪ್ರಾಧ್ಯಾಪಕರು ಹಾಗೂ ಸಿಂಡಿಕೇಟ್ ಸದಸ್ಯರು** | **ಸದಸ್ಯರು** |
| **6** | **ಉಪ ಕುಲಸಚಿವರು, ಕಾನೂನು ಕೋಶ** | **ಸಂಚಾಲಕರು** |

| | | |
|---|---|---|
| 12) | ವಿಷಯ : | ಕರ್ನಾಟಕ ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ಪ್ರಭಾರ ನಿರ್ದೇಶಕರ ಹುದ್ದೆಗೆ ಪ್ರಭಾರ ಭತ್ಯೆ ಮಂಜೂರ ಮಾಡುವ ವಿಷಯದ ಕುರಿತು. |
| ನಿರ್ಣಯ | | **ಕರ್ನಾಟಕ ವಿಶ್ವವಿದ್ಯಾಲಯದ ಕಾಲೇಜು ಅಭಿವೃದ್ಧಿ ಮಂಡಳಿಯ ಪ್ರಭಾರ ನಿರ್ದೇಶಕರ ಹುದ್ದೆಗೆ ಪ್ರಭಾರ ಭತ್ಯೆ ಮಂಜೂರ ಮಾಡುವ ವಿಷಯದ ಕುರಿತು ಸುಧೀರ್ಘವಾಗಿ ಚರ್ಚಿಸಿ ಸಧ್ಯ ವಿಶ್ವವಿದ್ಯಾಲಯದಲ್ಲಿ ಈ ಹುದ್ದೆಗೆ ಪ್ರಭಾರ ಭತ್ಯೆ ಮಂಜೂರು ಮಾಡಲು ನಿಯಮವಿಲ್ಲದ ಕಾರಣ ಪ್ರಸ್ತಾವನೆಗೆ ಅನುಮೋದಿಸದಂತೆ ಸಿಂಡಿಕೇಟ ಠರಾಯಿಸಿತು.** |
| 13) | ವಿಷಯ : | ಸ್ನಾತಕೋತ್ತರ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗವನ್ನು ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದೊಂದಿಗೆ ವಿಲೀನಗೊಳಿಸುವ ಕುರಿತಂತೆ ದಿನಾಂಕ: 19.08.2025 ರಂದು ಜರುಗಿದ ಡೀನರು, ಸಮಾಜವಿಜ್ಞಾನ ನಿಖಾಯ ಹಾಗೂ ವಿಷಯ ತಜ್ಞರನ್ನೊಳಗೊಂಡ ಸದರ ಸಮಿತಿಯಲ್ಲಿ ಮುಚ್ಚಿದ ಲಕೋಟಿಯಲ್ಲಿ ಸಲ್ಲಿಸಿದ ವರದಿಯನ್ನು ಪರಿಶೀಲಿಸುವ ಕುರಿತು. |
| ನಿರ್ಣಯ | | **ಸ್ನಾತಕೋತ್ತರ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗವನ್ನು ಸ್ನಾತಕೋತ್ತರ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದೊಂದಿಗೆ ವಿಲೀನಗೊಳಿಸುವ ಕುರಿತಂತೆ ದಿನಾಂಕ: 19.08.2025 ರಂದು ಜರುಗಿದ ಡೀನರು, ಸಮಾಜ ವಿಜ್ಞಾನ ನಿಖಾಯ ಹಾಗೂ ವಿಷಯ ತಜ್ಞರನ್ನೊಳಗೊಂಡ ಸದರ ಸಮಿತಿಯಲ್ಲಿ ಮುಚ್ಚಿದ ಲಕೋಟಿಯಲ್ಲಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ ಸಭೆಯಲ್ಲಿ ತೆರೆದು ಓದಲಾಗಿ, ಸದರ ವರದಿಯಂತೆ ವಿಭಾಗಗಳನ್ನು ವಿಲೀನಗೊಳಿಸಬಾರದೆಂದು ಸಿಂಡಿಕೇಟ ನಿರ್ಣಯಿಸಿತು.**<br><br>**ಮುಂದುವರೆದು, ವರದಿಯಂತೆ ಸ್ನಾತಕೋತ್ತರ ಪ್ರಾಚೀನ ಭಾರತೀಯ ಇತಿಹಾಸ ಮತ್ತು ಶಾಸನಶಾಸ್ತ್ರ ವಿಭಾಗವನ್ನು ಬೇರೆ ಸೂಕ್ತ ಕಟ್ಟಡ ಒದಗಿಸಲು.....** |



ಕುಲಸಚಿವರು　　　　ಕುಲಪತಿಗಳು

| | | |
|---|---|---|
| | | **.....ಕುಲಸಚಿವರ ಅಧ್ಯಕ್ಷತೆಯಲ್ಲಿ ಡೀನರು ಸಮಾಜ ವಿಜ್ಞಾನ ನಿಖಾಯ ಮತ್ತು ಕಲಾ ನಿಖಾಯದ ಡೀನರು ಬೇಟಿ ನೀಡಿ ಒಂದು ವರದಿಯನ್ನು ನೀಡುವಂತೆ, ಹಾಗೂ ಆ ವರದಿಯ ಆಧಾರದ ಮೇಲೆ ಸದರಿ ವಿಭಾಗವನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸಲು ಕ್ರಮಕೈಗೊಳ್ಳಲು ನಿರ್ಣಯಿಸಿತು.** |
| **14)** | **ವಿಷಯ :** | ಯುಜಿಸಿ 2022ರ ವಿನಿಯಮಾವಳಿಗಳಂತೆ ಹಾಗೂ ದಿನಾಂಕ: 08.09.2025 ರಂದು ಜರುಗಿದ ಡೀನ್ಸ್ ಕಮಿಟಿಯ ಶಿಫಾರಸ್ಸಿನ ಮೇರೆಗೆ ಸಂಶೋಧನಾ ಮಾರ್ಗದರ್ಶಕತ್ವಕ್ಕೆ ಮಾನ್ಯತೆ ನೀಡುವ ಕುರಿತು. |
| **<u>ನಿರ್ಣಯ</u>** | | **ಯುಜಿಸಿ 2022ರ ವಿನಿಯಮಾವಳಿಗಳಂತೆ ಹಾಗೂ ದಿನಾಂಕ: 08.09.2025 ರಂದು ಜರುಗಿದ ಡೀನ್ಸ್ ಕಮಿಟಿಯ ಶಿಫಾರಸ್ಸಿನ ಮೇರೆಗೆ ಸಂಶೋಧನಾ ಮಾರ್ಗದರ್ಶಕತ್ವಕ್ಕೆ ಮಾನ್ಯತೆ ನೀಡುವ ಕುರಿತು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.** |
| **15)** | **ವಿಷಯ :** | 2024ನೇ ಸಾಲಿನ ಅರಿವೇ ಗುರು ಪ್ರಶಸ್ತಿಗೆ ಮಾನ್ಯ ಕುಲಪತಿಗಳು ತೆಗೆದುಕೊಂಡ ನಿರ್ಣಯವನ್ನು ಸಿಂಡಿಕೇಟ್ ದೃಢೀಕರಣಕ್ಕಾಗಿ ಪ್ರಸ್ತಾವನೆ ಸೂಚಿ ಮಂಡಿಸುವ ಕುರಿತು. |
| **<u>ನಿರ್ಣಯ</u>** | | **2024ನೇ ಸಾಲಿನ ಅರಿವೇ ಗುರು ಪ್ರಶಸ್ತಿ ಪ್ರದಾನ ಮಾಡಲು ಮಾನ್ಯ ಕುಲಪತಿಗಳು ಕೈಗೊಂಡ ಕ್ರಮವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ದೃಢೀಕರಿಸಿತು.** |
| **16)** | **ವಿಷಯ :** | ದಿನಾಂಕ 12.09.2025 ರಂದು ಜರುಗಿದ ಆರೋಗ್ಯ ಸಲಹಾ ಸಮಿತಿ ಸಭೆಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಕ/ ಶಿಕ್ಷಕೇತರ ನೌಕರರು ಹಾಗೂ ಅವರ ಅವಲಂಬಿತರು ಅವಳಿ ನಗರದ ಕೆಲವೊಂದು ಆಸ್ಪತ್ರೆಗಳಲ್ಲಿ ಮಾತ್ರ ಚಿಕಿತ್ಸೆ ಪಡೆಯಲು ಸೌಲಭ್ಯವಿದ್ದು ಸದುಪಯೋಗ ಪಡೆಯಲು ಸಭೆಯಲ್ಲಿ ಇದ್ದ ಎಲ್ಲ ಸದಸ್ಯರ ವಿನಂತಿ ವಿಷಯವಾಗಿ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು. |
| **<u>ನಿರ್ಣಯ</u>** | | **ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಕ/ ಶಿಕ್ಷಕೇತರ ನೌಕರರು ಹಾಗೂ ಅವರ ಅವಲಂಬಿತರು ಅವಳಿ ನಗರದ ಕೆಲವೊಂದು ಆಸ್ಪತ್ರೆಗಳಲ್ಲಿ ಮಾತ್ರ ಚಿಕಿತ್ಸೆ ಪಡೆಯಲು ಸೌಲಭ್ಯವಿದ್ದು ಸದುಪಯೋಗ ಪಡೆಯುವ ವಿಷಯವಾಗಿ ಸುಧೀರ್ಘವಾಗಿ ಚರ್ಚಿಸಿ ಪ್ರಸ್ತಾವನೆಯಲ್ಲಿರುವ ಆಸ್ಪತ್ರೆಗಳು ನೇರವಾಗಿ ಸರ್ಕಾರಕ್ಕೆ ಪತ್ರ ಬರೆದು ಸರ್ಕಾರವು ಗೊತ್ತುಪಡಿಸಿದ ಆಸ್ಪತ್ರೆಗಳ ಯಾದಿಯಲ್ಲಿ ಪರಿಗಣಿಸುವಂತೆ ವಿನಂತಿಸಲು ಸೂಚಿಸಬಹುದೆಂದು ಸಿಂಡಿಕೇಟ ನಿರ್ಣಯಿಸಿತು. ತದನಂತರ ಆ ಯಾದಿಯಂತೆ ವಿಶ್ವವಿದ್ಯಾಲಯವು ಮನ್ನಣೆ ನೀಡುವುದು ಎಂದು ನಿರ್ಣಯಿಸಲಾಯಿತು.** |
| **17)** | **ವಿಷಯ :** | 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರ್‌ನ ಪರೀಕ್ಷೆ ಫಲಿತಾಂಶದ ಅಂಕಗಳಲ್ಲಿ ವ್ಯತ್ಯಾಸ ಕಂಡು ಬಂದಿರುವ ಪ್ರಯುಕ್ತ ಡಾ.(ಶ್ರೀಮತಿ) ಶಶಿರೇಖಾ ಮಾಳಗಿ ಇವರ ಬಗ್ಗೆ ದಿನಾಂಕ: 31.07.2025ರ ಸಿಂಡಿಕೇಟ್ ನಿರ್ಣಯ ಸಂಖ್ಯೆ 24ರ ಕುರಿತು. |
| **<u>ನಿರ್ಣಯ</u>** | | **3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರ್‌ನ ಪರೀಕ್ಷೆ ಫಲಿತಾಂಶದ ಅಂಕಗಳಲ್ಲಿ ವ್ಯತ್ಯಾಸ ಕಂಡು ಬಂದಿರುವ ಪ್ರಯುಕ್ತ ಡಾ.(ಶ್ರೀಮತಿ) ಶಶಿರೇಖಾ ಮಾಳಗಿ ಇವರ ಬಗ್ಗೆ ದಿನಾಂಕ: 31.07.2025ರ ಸಿಂಡಿಕೇಟ್ ನಿರ್ಣಯದ ಕುರಿತು ಸದರೀಯವರು ದಂಡದ ಮೊತ್ತ ರೂ.82,500/- ಗಳನ್ನು ವಿಶ್ವವಿದ್ಯಾಲಯಕ್ಕೆ ಭರಿಸಿದ್ದು, ಅದರಂತೆ ಅವರಿಗೆ ವಿಧಿಸಿದ ಷರತ್ತುಗಳನ್ನು ಹಿಂಪಡೆದು ಮೊದಲಿನಂತೆ ಕಾರ್ಯ ನಿರ್ವಹಿಸಲು ಸೂಚಿಸಿ ಕೈಗೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.** |



ಕುಲಸಚಿವರು

ಕುಲಪತಿಗಳು

## ಅಧ್ಯಕ್ಷರ ಅಪ್ಪಣೆಮೇರೆಗೆ ಬಂದ ವಿಷಯಗಳ ಪಟ್ಟಿ

| | | |
|---|---|---|
| 18) | ವಿಷಯ : | ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಜರುಗುವ ನೇರನೇಮಕಾತಿ ಹಾಗೂ ಬೋಧಕ ಸಿಬ್ಬಂದ್ದಿಗಳ ಪದೋನ್ನತಿಗಾಗಿ ಸಲ್ಲಿಸಿದ ಅರ್ಜಿಗಳ ಪರಿಶೀಲನೆಗಾಗಿ ಹಾಗೂ ಬಿಓಎ ಸಭೆಗಳಿಗೆ ಹಾಜರಾಗುವ ಸದಸ್ಯರುಗಳಿಗೆ ಆಸನ ಭತ್ತೆ (Sitting Fees) ಅನುಕೂಲ ಸೌಕರ್ಯ (Conveyance Allowance) ಹಾಗೂ ಸ್ವಂತ ವಾಹನ/ ಬಾಡಿಗೆ ವಾಹನದ ಪ್ರತಿ ಕಿ.ಮೀ. ಕಾರು ಮೈಲೇಜ್ ದರಗಳನ್ನು ಹಾಗೂ ವಿಮಾನ ಪ್ರಯಾಣದ ಬಿಲ್ಲುಗಳನ್ನು ಪಾವತಿ ಮಾಡುವ ಸಂಬಂಧವಾಗಿ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗಾಗಿ ಸಲ್ಲಿಸಲು ಸಿದ್ಧಪಡಿಸಿದ ಕರಡು ಅನುಶಾಸನವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸುವ ಕುರಿತು. |
| | ನಿರ್ಣಯ | **ನಿಖಾಯಗಳ ಡೀನರ ಸಮಿತಿಯು ವಿವಿಧ ಭತ್ಯೆಗಳ ಕುರಿತು ಮಾಡಿರುವ ಶಿಫಾರಸ್ಸು ಪರಿಶೀಲಿಸಿದ ಸಿಂಡಿಕೇಟ ಸಭೆಯು ಸದರಿ ಭತ್ಯೆಗಳ ಬಗ್ಗೆ ಹಣಕಾಸು ಅಧಿಕಾರಿಗಳ ಅಭಿಪ್ರಾಯ ಪಡೆದು ಕ್ರಮ ಜರುಗಿಸಲು ಸಿಂಡಿಕೇಟ ನಿರ್ಣಯಿಸಿತು.**<br>**ಮುಂದುವರೆದು, ಸಂಬಂಧಪಟ್ಟ ವಿಭಾಗಗಳಿಂದ ಸದರಿ ಭತ್ಯೆಗಳನ್ನು ಹಣಕಾಸು ಅಧಿಕಾರಿಯವರ ಸಲಹೆಯೊಂದಿಗೆ ನಿಯಮಾನುಸಾರ ಪರಿಷ್ಕರಿಸಿ ಅನುಶಾಸನವನ್ನು ಗೌರವಾನ್ವಿತ ಕುಲಾಧಿಪತಿಗಳ ಅನುಮೋದನೆ ಪಡೆಯಲು ಸರ್ಕಾರಕ್ಕೆ ಸಲ್ಲಿಸುವಂತೆ ಸಿಂಡಿಕೇಟ ನಿರ್ಣಯಿಸಿತು.** |
| 19) | ವಿಷಯ : | ಸ್ಥಳೀಯ ಮಹಾವಿದ್ಯಾಲಯಗಳಿಗೆ ವಿದ್ಯಾರ್ಥಿಗಳ ವರ್ಗಾವಣೆಯನ್ನು ನಿರ್ಬಂಧಿಸುವ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸುವ ಕುರಿತು. |
| | ನಿರ್ಣಯ | **ಸ್ಥಳೀಯ ಮಹಾವಿದ್ಯಾಲಯಗಳಿಗೆ ವಿದ್ಯಾರ್ಥಿಗಳ ವರ್ಗಾವಣೆಯನ್ನು ನಿರ್ಬಂಧಿಸುವ ಬಗ್ಗೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಸ್ನಾತಕೋತ್ತರ ಪದವಿಗಳಿಗೆ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ವರ್ಗಾವಣೆ ಮಾಡಲು ಅವಕಾಶಗಳನ್ನು ನೀಡದಂತೆ ಹಾಗೂ ಜಿಲ್ಲಾ ಕೇಂದ್ರದಿಂದ ಬೇರೆ ಜಿಲ್ಲಾ ಕೇಂದ್ರಕ್ಕೆ ಸ್ನಾತಕ ಪದವಿಗಳಿಗೆ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಕೆಲವೊಂದು ತುರ್ತು ಮತ್ತು ಅನಿವಾರ್ಯ ಪ್ರಸಂಗಗಳಲ್ಲಿ (ದುರ್ಘಟನೆ, ಆಸ್ಪತ್ರೆಗೆ ದಾಖಲಾದಲ್ಲಿ ಮತ್ತು ಪೋಷಕರ ವರ್ಗಾವಣೆ ಸಂದಂರ್ಭದಲ್ಲಿ ಮಾತ್ರ) ಅವಕಾಶ ನೀಡುವಂತೆ ವಿಶ್ವವಿದ್ಯಾಲಯದ ಸದ್ಯ ಪ್ರಚಲಿತದಲ್ಲಿರುವ ನಿಯಮಾವಳಿಗಳ ಅನುಸಾರ ಕ್ರಮ ಜರುಗಿಸಲು ಸಿಂಡಿಕೇಟ ನಿರ್ಣಯಿಸಿತು.** |
| 20) | ವಿಷಯ : | ಸಿಂಡಿಕೇಟ ಉಪಸಮಿತಿಯ ವರದಿಯನ್ನು ಸಲ್ಲಿಸುವ ಕುರಿತು. |
| | ನಿರ್ಣಯ | **ಕರ್ನಾಟಕ ವಿಶ್ವವಿದ್ಯಾಲಯದ ಆದಾಯ ಮೂಲಗಳನ್ನು ಹೆಚ್ಚಿಸಲು ಉಪ ಸಮಿತಿಯು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ ಸಭೆಯಲ್ಲಿ ತೆರೆದು ಓದಲಾಗಿ ಸದರ ವರದಿಯನ್ನು ಒಪ್ಪಿಕೊಂಡು ಸಮಿತಿಯ ಶಿಫಾರಸ್ಸಿನಂತೆ ಆಯಾ ವಿಭಾಗದಿಂದ ಸೂಕ್ತ ಕ್ರಮಕೈಗೊಳ್ಳಲು ಕ್ರಮವಹಿಸುವಂತೆ ಸಿಂಡಿಕೇಟ ನಿರ್ಣಯಿಸಲಾಯಿತು.**<br>**ಮುಂದುವರೆದು, ವಿಶ್ವವಿದ್ಯಾಲಯದ ವಿವಿಧ ದರ್ಜೆಯ ವಸತಿ ಗೃಹಗಳು ಖಾಲಿಯಾಗಿದ್ದು, ಅವುಗಳ ನಿರ್ವಹಣೆಯು ಕಷ್ಟಸಾಧ್ಯವಾಗಿದ್ದು ಅವುಗಳಿಗೆ ಪ್ರತಿ ತಿಂಗಳು ವಿದ್ಯುತ್ ಮತ್ತು ನೀರಿನ ಬಿಲ್ಲ್ ಅನಾವಶ್ಯಕವಾಗಿ ಕಟ್ಟಲಾಗುತ್ತಿದ್ದು ಇದು ವಿಶ್ವವಿದ್ಯಾಲಯಕ್ಕೆ ಆರ್ಥಿಕವಾಗಿ ಹೊರೆಯಾಗುತ್ತಿದೆ. ಸದರಿ ವಸತಿ ನಿಲಯಗಳನ್ನು ಎನ್.ಜಿ.ಓ ಗಳಿಗೆ ಅಥವಾ ಆಶ್ರಮಗಳಿಗೆ ಸೂಕ್ತ ಒಂದು ದರ ನಿಗದಿಪಡಿಸಿ ವಸತಿ ನಿಲಯಗಳು ಹಾಳಾಗದಂತೆ ನಿರ್ವಹಿಸಲು ಕ್ರಮ ಜರುಗಿಸಲು ಮತ್ತು ರೂಪುರೇಷೆಗಳನ್ನು ತಯಾರಿಸಲು ಈ ಕೆಳಗಿನ ಸಮಿತಿಯನ್ನು ರಚಿಸಲು ಸಿಂಡಿಕೇಟ ನಿರ್ಣಯಿಸಿತು.** |



ಕುಲಸಚಿವರು

ಕುಲಪತಿಗಳು

| | | |
|---|---|---|
| 1 | ಡಾ. ಎಸ್. ರಾಮಾಂಜನೇಯಲು,<br>ಪ್ರಾಧ್ಯಾಪಕರು ಮತ್ತು ಡೀನರು | ಅಧ್ಯಕ್ಷರು |
| 2 | ಶ್ರೀಮತಿ. ರತ್ನಾ ಪಾಟೀಲ<br>ಸಿಂಡಿಕೇಟ ಸದಸ್ಯರು | ಸದಸ್ಯರು |
| 3 | ಶ್ರೀ. ರಾಬರ್ಟ್ ದದ್ದಾಪುರಿ<br>ಸಿಂಡಿಕೇಟ ಸದಸ್ಯರು | ಸದಸ್ಯರು |
| 4 | ಶ್ರೀ. ಶ್ಯಾಮ್ ಮಲ್ಲನಗೌಡರ,<br>ಸಿಂಡಿಕೇಟ ಸದಸ್ಯರು | ಸದಸ್ಯರು |
| 5 | ಶ್ರೀ. ಸಿ. ಎಮ್. ಚಿಕ್ಕಮಠ<br>ಸಹಾಯಕ ಕಾರ್ಯನಿರ್ವಾಹಕ<br>ಅಭಿಯಂತರರು | ಸದಸ್ಯರು |
| 6 | ಶ್ರೀ. ಗಿರೀಶ್ ಜೋಶಿ<br>ಸ್ಥಾನಿಕ ಅಭಿಯಂತರರು | ಸದಸ್ಯ<br>ಕಾರ್ಯದರ್ಶಿಗಳು |

ಅಲ್ಲದೇ, ವಿಶ್ವವಿದ್ಯಾಲಯದಲ್ಲಿ ಸಸ್ಯೋದ್ಯಾನ, ಮುಖ್ಯ ಗ್ರಂಥಾಲಯ, ಮುದ್ರಣಾಲಯ, ವಿಶ್ವವಿದ್ಯಾಲಯದ ವೈಜ್ಞಾನಿಕ ಉಪಕರಣಗಳ ಕೇಂದ್ರ, ಆಟದ ಮೈದಾನ, ವಿಶ್ವವಿದ್ಯಾಲಯದ ಶಾಲೆಗಳು, ಸೌರಶಕ್ತಿ ವಿದ್ಯೂದಿಕರಣ ಹಾಗೂ ಇತರೆ ವಿಭಾಗಗಳ ಉನ್ನತೀಕರಣಕ್ಕಾಗಿ ಅನುದಾನದ ಅವಶ್ಯಕತೆ ಇರುವುದರ ಕುರಿತು ಚರ್ಚಿಸಲಾಗಿ ವಿವಿಧ ಸಂಸ್ಥೆಗಳಿಂದ ಅನುದಾನ ಕ್ರೋಢೀಕರಣಕ್ಕಾಗಿ ರೂಪುರೇಷೆಗಳನ್ನು ತಯಾರಿಸಲು ಈ ಕೆಳಗಿನ ಸಮಿತಿಯನ್ನು ರಚಿಸಲಾಯಿತು.

| | | |
|---|---|---|
| 1 | ಶ್ರೀಮತಿ. ರತ್ನಾ ಪಾಟೀಲ<br>ಸಿಂಡಿಕೇಟ ಸದಸ್ಯರು | ಅಧ್ಯಕ್ಷರು |
| 2 | ಶ್ರೀಮತಿ. ಅಂಜನಾ ಬಸನಗೌಡರ<br>ಸಿಂಡಿಕೇಟ ಸದಸ್ಯರು | ಸದಸ್ಯರು |
| 3 | ಡಾ. ಎ.ಎ. ಮೂಲಿಮನಿ<br>ಸಿಂಡಿಕೇಟ ಸದಸ್ಯರು,<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಖಾಯ, | ಸದಸ್ಯರು |
| 4 | ಡಾ. ಬಸವರಾಜ ಗೊರವರ<br>ಸಿಂಡಿಕೇಟ ಸದಸ್ಯರು | ಸದಸ್ಯರು |
| 5 | ಶ್ರೀ. ಮಹೇಶ ಹುಲೇನ್ನವರ<br>ಸಿಂಡಿಕೇಟ ಸದಸ್ಯರು, | ಸದಸ್ಯರು |
| 6 | ಡಾ. ಶಿವಪ್ಪಾ<br>ಪ್ರಾಧ್ಯಾಪಕರು, ಸ್ನಾತಕೋತ್ತರ ವ್ಯವಹಾರ ಅಧ್ಯಯನ ವಿಭಾಗ, ಕವಿವಿ.ಧಾರವಾಡ | ಸದಸ್ಯರು |
| 7 | ಡಾ. ಎ. ಎಸ್. ತಳವಾರ<br>ಹಿರಿಯ ಪ್ರಾಧ್ಯಾಪಕರು, ಸ್ನಾತಕೋತ್ತರ ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗ, ಕವಿವಿ, ಧಾರವಾಡ | ಸದಸ್ಯರು |
| 8 | ಉಪ ಕುಲಸಚಿವರು<br>ಹಣಕಾಸು ವಿಭಾಗ | ಸದಸ್ಯ<br>ಕಾರ್ಯದರ್ಶಿಗಳು |



ಕುಲಸಚಿವರು

ಕುಲಪತಿಗಳು

| | | |
|---|---|---|
| 21) | ವಿಷಯ : | ಶ್ರೀ. ಬಿ.ಆರ್. ಸೋಮಣ್ಣವರ, ಉಪನ್ಯಾಸಕರು, ಭೌತಶಾಸ್ತ್ರ ವಿಭಾಗ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ ಇವರನ್ನು ಸೇವೆಯಿಂದ ವಜಾಗೊಳಿಸಿದ್ದನ್ನು ಹಿಂಪಡೆದು, ದಿನಾಂಕ.07.02.2006 ರಿಂದ ಅನ್ವಯವಾಗುವಂತೆ ಸಲ್ಲಿಸಿದ ರಾಜೀನಾಮೆಯನ್ನು ಅಂಗೀಕರಿಸಿ ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸುವ ಕುರಿತಂತೆ ಸದರಿಯವರು ದಿನಾಂಕ: 27.10.2025 ರಂದು ವಿನಂತಿಸಿದ ವಿಷಯವನ್ನು ಪರಿಶೀಲಿಸಿ ಪರಿಗಣಿಸುವ ಕುರಿತು. |
| ನಿರ್ಣಯ | | **ಶ್ರೀ. ಬಿ.ಆರ್. ಸೋಮಣ್ಣವರ, ಉಪನ್ಯಾಸಕರು, ಭೌತಶಾಸ್ತ್ರ ವಿಭಾಗ, ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯ, ಧಾರವಾಡ ಇವರನ್ನು ದಿನಾಂಕ.07.02.2006 ರಿಂದ ಅನ್ವಯವಾಗುವಂತೆ ಸೇವೆಯಿಂದ ವಜಾಗೊಳಿಸಿದ್ದನ್ನು ಹಿಂಪಡೆದು, ಸಲ್ಲಿಸಿದ ರಾಜೀನಾಮೆಯನ್ನು ಅಂಗೀಕರಿಸಿ ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸುವ ಕುರಿತಂತೆ ಸದರಿಯವರು ದಿನಾಂಕ: 27.10.2025 ರಂದು ವಿನಂತಿಸಿದ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಇವರನ್ನು ದಿನಾಂಕ.07.02.2006 ರಿಂದ ಅನ್ವಯವಾಗುವಂತೆ ಸೇವೆಯಿಂದ ವಜಾಗೊಳಿಸಿದ್ದನ್ನು ಹಿಂಪಡೆದು, ಸಲ್ಲಿಸಿದ ರಾಜೀನಾಮೆಯನ್ನು ಅಂಗೀಕರಿಸಿ ವಿಶ್ವವಿದ್ಯಾಲಯದ ಸೇವೆಯಿಂದ ಬಿಡುಗಡೆಗೊಳಿಸಲು ಹಾಗೂ ವಿಶ್ವವಿದ್ಯಾಲಯದಿಂದ ಯಾವುದೇ ಆರ್ಥಿಕ ಸೌಲಭ್ಯಗಳನ್ನು ಒದಗಿಸದಿರುವ ಷರತ್ತಿಗೊಳಪಟ್ಟು ಅನುಮೋದನೆಯನ್ನು ನೀಡಿತು.** |
| 22) | ವಿಷಯ : | ಮೇ/ಜೂನ್-2024ರಲ್ಲಿ ಜರುಗಿದ LL.B. 3 Years & B.A. LL.B. 5 years ಕೋರ್ಸುಗಳ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ಅಂಕಗಳನ್ನು ನೀಡುವಲ್ಲಿ ಉದ್ದೇಶಪೂರ್ವಕವಾಗಿ ಅನ್ಯಾಯ ಮಾಡಿದ್ದಾರೆ ಎಂದು ಕಾನೂನು ವಿದ್ಯಾರ್ಥಿಗಳು ದೂರು ಸಲ್ಲಿಸಿದ ಕುರಿತು. |
| ನಿರ್ಣಯ | | **ಮೇ/ಜೂನ್-2024ರಲ್ಲಿ ಜರುಗಿದ LL.B. 3 Years & B.A. LL.B. 5 years ಕೋರ್ಸುಗಳ ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ಅಂಕಗಳನ್ನು ನೀಡುವಲ್ಲಿ ಉದ್ದೇಶಪೂರ್ವಕವಾಗಿ ಅನ್ಯಾಯ ಮಾಡಿದ್ದಾರೆ ಎಂದು ಕಾನೂನು ವಿದ್ಯಾರ್ಥಿಗಳು ದೂರು ಸಲ್ಲಿಸಿದ ವಿಷಯವಾಗಿ ದಿನಾಂಕ: 05.08.2025 ರಂದು ಜರುಗಿದ ಸತ್ಯಶೋಧನಾ ಸಮಿತಿ ಸಭೆಯಲ್ಲಿ ಚರ್ಚಿಸಿ ವರದಿ ಸಿದ್ಧಪಡಿಸಿ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ ಸಭೆಯಲ್ಲಿ ತರೆದು ಓದಲಾಗಿ ಈಗಾಗಲೇ ಸಮಿತಿಯು ಸಲ್ಲಿಸಿರುವ ವರದಿಯನ್ನು ಆಧರಿಸಿ ಸದರಿ ವಿಷಯವನ್ನು ಮುಕ್ತಾಯಗೊಳಿಸಲು ಹಾಗೂ ಈ ರೀತಿಯ ಪ್ರಸಂಗಗಳು ಮರುಕಳಿಸದಂತೆ ಕಾರ್ಯನಿರ್ವಹಿಸಲು ಸಂಬಂದಿಸಿದ ಪರೀಕ್ಷಾ ಕಾರ್ಯನಿರತ ಎಲ್ಲ ಸಿಬ್ಬಂದಿಗಳಿಗೆ ಸೂಚಿಸಲು ಕ್ರಮಜರುಗಿಸುವಂತೆ ಸಿಂಡಿಕೇಟ್ ನಿರ್ಣಯಿಸಿತು.** |
| 23) | ವಿಷಯ : | ಪ್ರವೇಶ ನಿಯಮಾವಳಿಗಳನ್ನು ಉಲ್ಲಂಘಿಸಿ 6ನೇ ಸೆಮಿಸ್ಟರ್ ಪರೀಕ್ಷೆ ಬರೆದ ದೀಪಾ ಹಿರೇಮಠ ಇವರ ಫಲಿತಾಂಶ ಪ್ರಕಟಿಸಲು ಕೋರಿದ ಅರ್ಜಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮಂಡಿಸುವ ಕುರಿತು. |
| ನಿರ್ಣಯ | | **ಪ್ರವೇಶ ನಿಯಮಾವಳಿಗಳನ್ನು ಉಲ್ಲಂಘಿಸಿ 6ನೇ ಸೆಮಿಸ್ಟರ್ ಪರೀಕ್ಷೆ ಬರೆದ ದೀಪಾ ಹಿರೇಮಠ ಇವರ ಫಲಿತಾಂಶ ಪ್ರಕಟಿಸಲು ಕೋರಿದ ಅರ್ಜಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ವಿದ್ಯಾರ್ಥಿನಿಯ ಕುರಿತು ಈ ಹಿಂದೆ ರಚಿಸಿದ ಸಮಿತಿಯ ವರದಿಯ ಅನ್ವಯ ದಿನಾಂಕ 24.06.2022 ರಂದು ಜರುಗಿದ ಸಿಂಡಿಕೇಟ ನಿರ್ಣಯ ಸಂಖ್ಯೆ: 17 ರಂತೆ ಕ್ರಮ ಜರುಗಿಸಲು ಹಾಗೂ ಮಹಾವಿದ್ಯಾಲಯಕ್ಕೆ ಸೂಕ್ತ ದಂಡ ನಿಗದಿಪಡಿಸಲು ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.** |

ಕುಲಸಚಿವರು



ಕುಲಪತಿಗಳು

| | | |
|---|---|---|
| **24)** | **ವಿಷಯ :** | ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಬಿ.ಎಡ್ ಮಹಾವಿದ್ಯಾಲಯಗಳಲ್ಲಿ ಶೈಕ್ಷಣಿಕ ಗುಣಮಟ್ಟ ಸುಧಾರಣೆಗಾಗಿ ವಿಶ್ವವಿದ್ಯಾಲಯವು ಹೊರಡಿಸಿರುವ ಸುತ್ತೋಲೆಗಳು ಅನುಷ್ಠಾನಗೊಳ್ಳದೇ ಇರುವ ಕುರಿತಂತೆ ಡಾ. ಶಿವಾನಂದ ವಿ ನಾಯಕ ಸಿಂಡಿಕೇಟ ಸದಸ್ಯರು ಇವರು ಸಲ್ಲಿಸಿದ ಪತ್ರವನ್ನು ಸಿಂಡಿಕೇಟ್ ಸಭೆಯ ಪರಿಶೀಲನೆಗಾಗಿ ಮಂಡಿಸುವ ಕುರಿತು. |
| **ನಿರ್ಣಯ** | | **ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಬಿ.ಎಡ್ ಮಹಾವಿದ್ಯಾಲಯಗಳಲ್ಲಿ ಶೈಕ್ಷಣಿಕ ಗುಣಮಟ್ಟ ಸುಧಾರಣೆಗಾಗಿ ವಿಶ್ವವಿದ್ಯಾಲಯವು ಹೊರಡಿಸಿರುವ ಸುತ್ತೋಲೆಗಳು ಅನುಷ್ಠಾನಗೊಳ್ಳದೇ ಇರುವ ಕುರಿತಂತೆ ಡಾ. ಶಿವಾನಂದ ವಿ. ನಾಯಕ, ಸಿಂಡಿಕೇಟ ಸದಸ್ಯರು ಇವರು ಸಲ್ಲಿಸಿದ ಪತ್ರವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಈ ವಿಷಯವಾಗಿ ಮೊದಲಿನಂತೆ Moderation Board ರಚಿಸಿ ಎಲ್ಲ ಬಿ.ಎಡ್ ಮಹಾವಿದ್ಯಾಲಯಗಳಿಗೆ ಭೇಟಿ ನೀಡಿ ಆಂತರಿಕ ಅಂಕಗಳನ್ನು(IA) Moderate ಮಾಡಲು ನಿರ್ಣಯಿಸಲಾಯಿತು. ಕುಲಸಚಿವರು (ಮೌಲ್ಯಮಾಪನ) ರವರು Moderation Board ರಚಿಸಲು ಕ್ರಮವಹಿಸಲು ಸೂಚಿಸಲಾಯಿತು.** |
| **25)** | **ವಿಷಯ :** | Consideration of request for correction of date of eligibility of promotions Career Advancement Scheme (CAS) promotions |
| **ನಿರ್ಣಯ** | | **The Syndicate considered the report submitted by the Committee with regard to corrections of date of eligibility for promotions under UGC Career Advancement Scheme (CAS) notionally without any financial benefits to the following teaching staff.**<br>**1. Dr. Sharada V. Bhat**<br>**2. Dr. S.B. Munoli**<br>**3. Dr. A.S. Talawar**<br>**4. Dr. Jayashree Tonannavar**<br>**5. Dr. N.Shivanna** |
| **26)** | **ವಿಷಯ :** | ತಿದ್ದುಪಡಿ ಮಾಡಿರುವ "Draft Statute Governing the operation of Research and Development (R&D) Projects in Karnatak University, 2025" ನ್ನು ಪರಿಶೀಲಿಸುವ ಕುರಿತು. |
| **ನಿರ್ಣಯ** | | **ತಿದ್ದುಪಡಿ ಮಾಡಿರುವ "Draft Statute Governing the operation of Research and Development (R&D) Projects in Karnatak University, 2025" ಕರಡು ಅನುಶಾಸನವನ್ನು ದಿನಾಂಕ: 28.10.2025 ರಂದು ಜರುಗಿದ ವಿದ್ಯಾವಿಷಯಕ್ ಪರಿಷತ್ ಸಭೆಯಲ್ಲಿ ತಿದ್ದುಪಡಿ ಮಾಡಿದ ಕರಡು ಅನುಶಾಸನವನ್ನು ಸರ್ಕಾರಕ್ಕೆ ಕಳುಹಿಸಲು ನಿರ್ಣಯಿಸಿದ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ ಸಭೆಯು ಅನುಮೋದಿಸಿತು.** |
| **27)** | **ವಿಷಯ :** | ಕನಕದಾಸ ಶಿಕ್ಷಣ ಸಮಿತಿ ಗದಗ ಸ್ನಾತಕೋತ್ತರ ಅಧ್ಯಯನ ಕೇಂದ್ರದ ರದ್ದಾದ ಪರೀಕ್ಷಾ ಕೇಂದ್ರವನ್ನು ಮರಳಿ ನೀಡುವ ಕುರಿತು ರಚಿಸಿದ ಡೀನರ ಸಮಿತಿಯು ಸಲ್ಲಿಸಿದ ವರದಿಯನ್ನು ಸಿಂಡಿಕೇಟ್ ಸಭೆಗೆ ಮಂಡಿಸುವ ಕುರಿತು. |
| **ನಿರ್ಣಯ** | | **ಕನಕದಾಸ ಶಿಕ್ಷಣ ಸಮಿತಿ ಗದಗ ಸ್ನಾತಕೋತ್ತರ ಅಧ್ಯಯನ ಕೇಂದ್ರದ ರದ್ದಾದ ಪರೀಕ್ಷಾ ಕೇಂದ್ರವನ್ನು ಮರಳಿ ನೀಡುವ ಕುರಿತು ರಚಿಸಿದ ಡೀನರ ಸಮಿತಿಯು ಸಲ್ಲಿಸಿದ ವರದಿಯನ್ನು ಪರಿಶೀಲಿಸಿ ಅನುಮೋದಿಸಿ ಸಿಂಡಿಕೇಟನಲ್ಲಿ ಕುಲಸಚಿವರು (ಮೌಲ್ಯಮಾಪನ) ಇವರು ಸಲ್ಲಿಸಿದ ಮಾಸ್ ಕಾಪಿ ವಿಡಿಯೋ ವೀಕ್ಷಿಸಿದ ಸಿಂಡಿಕೇಟ ಸದಸ್ಯರು ಇದು ಮಾಸ್ ಕಾಪಿ ಆಗಿರುವುದು ದೃಢಪಟ್ಟಿರುವುದರಿಂದ ನಿಯಮಾನುಸಾರ ದಂಡ ವಿಧಿಸಲು ನಿರ್ಣಯಿಸಿತು. ಮುಂದುವರೆದು, ಪರೀಕ್ಷಾ ಸಂಪೂರ್ಣ.....** |



ಕುಲಸಚಿವರು

ಕುಲಪತಿಗಳು

| | | |
|---|---|---|
| | | ....ಕಾರ್ಯವನ್ನು ಮಹಾವಿದ್ಯಾಲಯದ ಪ್ರಾಚಾರ್ಯರು ಹಾಗೂ ಖಾಯಂ ಸಿಬ್ಬಂದಿಗಳು ಮಾತ್ರ ನಿರ್ವಹಿಸಲು ಕ್ರಮ ಜರುಗಿಸುವುದು. ಸಿಸಿ ಕ್ಯಾಮರಾಗಳನ್ನು ಕಡ್ಡಾಯವಾಗಿ ಅಳವಡಿಸಿ ವಿಶ್ವವಿದ್ಯಾಲಯಕ್ಕೆ ವರದಿ ನೀಡುವುದು. ಆ ವರದಿಯ ಆಧಾರದ ಮೇಲೆ ಕುಲಸಚಿವರು (ಮೌಲ್ಯಮಾಪನ) ಇವರು ಖುದ್ದಾಗಿ ಪರಿಶೀಲಿಸಿ ಪರೀಕ್ಷಾ ಕೇಂದ್ರವನ್ನು ನೀಡುವ ಕುರಿತು ನಿಯಮಾನುಸಾರ ಕ್ರಮ ಜರುಗಿಸುವಂತೆ ಸಿಂಡಿಕೇಟ ನಿರ್ಣಯಿಸಿತು. |
| **28)** | **ವಿಷಯ :** | ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಗೆ ಮರುನಾಮಕರಣ ಮಾಡುವ ಕುರಿತು. |
| **ನಿರ್ಣಯ** | | **ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ ಇಡಿ 325 ಯುಎನ್ಇ 2025 ದಿನಾಂಕ 14.10.2025 ರ ಮೂಲಕ ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳಿಗೆ ಮರುನಾಮಕರಣ ಮಾಡುವ ಕುರಿತು ಕೂಡಲೇ ಪರಿಶೀಲಿಸಿ ಅಭಿಪ್ರಾಯ/ವರದಿ ನೀಡುವಂತೆ ಕೋರಲಾಗಿದ್ದು, ಸದರ ವಿಷಯವನ್ನು ಸಿಂಡಿಕೇಟ ಸಭೆಯಲ್ಲಿ ಚರ್ಚಿಸಿ ಕರ್ನಾಟಕ ವಿಶ್ವವಿದ್ಯಾಲಯವು ಉತ್ತರ ಕರ್ನಾಟಕದಲ್ಲಿ ಹೆಸರುವಾಸಿಯಾಗಿರುವ ಹಿರಿಯ ಮತ್ತು ಹಳೆಯ ವಿಶ್ವವಿದ್ಯಾಲಯವಾಗಿದ್ದು ಈ ಹೆಸರಿನೊಂದಿಗೆ ಈ ಕ್ಷೇತ್ರದಲ್ಲಿರುವ ಅನೇಕ ವಿದ್ಯಾರ್ಥಿಗಳು, ಸಾರ್ವಜನಿಕರು ಮತ್ತು ಶಿಕ್ಷಣ ತಜ್ಞರು ಒಂದು ಭಾವನಾತ್ಮಕ ಸಂಬಂಧವನ್ನು ಹೊಂದಿದ್ದು, ಈಗಿರುವ "ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ" ಎಂಬ ಹೆಸರನ್ನು ಮುಂದುವರೆಸಲು, ಸರ್ವಾನುಮತದಿಂದ ನಿರ್ಣಯಿಸಿತು.** |
| **29)** | **ವಿಷಯ :** | ಬಿ.ಎಡ್ ಇಂಟಿಗ್ರೇಟೆಡ್ ಕೋರ್ಸುಗಳ ಶುಲ್ಕಗಳನ್ನು ಮಹಾವಿದ್ಯಾಲಯಗಳಿಂದ ಆಕರಿಸುವ ಕುರಿತು. |
| **ನಿರ್ಣಯ** | | **ಬಿ.ಎಡ್ ಇಂಟಿಗ್ರೇಟೆಡ್ ಕೋರ್ಸುಗಳ ಶುಲ್ಕಗಳನ್ನು ಮಹಾವಿದ್ಯಾಲಯಗಳಿಂದ ಆಕರಿಸುವ ಕುರಿತು ರಚಿಸಿಲಾದ ಸಮಿತಿಯು ಸಲ್ಲಿಸಿದ ವರದಿಯನ್ನು ಪರಿಶೀಲಿಸಲಾಗಿ ಸಮಿತಿ ನಿಗದಿಪಡಿಸಿರುವ ಶುಲ್ಕಗಳಲ್ಲಿ ಅಲ್ಪ ಪ್ರಮಾಣದ ಮಾರ್ಪಾಡುಗಳನ್ನು ಮಾಡಿ ಲಗತ್ತಿಸಿರುವ "ಸಿ" ಯಾದಿಯಲ್ಲಿ ನಿಗದಿಪಡಿಸಿದ ಶುಲ್ಕವನ್ನು ಆಕರಿಸಲು ಕ್ರಮಜರುಗಿಸುವಂತೆ ಸಿಂಡಿಕೇಟ ನಿರ್ಣಯಿಸಿತು.** |
| **30)** | **ವಿಷಯ :** | ವಿಶ್ವವಿದ್ಯಾಲಯದಲ್ಲಿ ಸಂಚಿತ ವೇತನದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರವ ಸಿಬ್ಬಂದಿಗಳ ಕುರಿತು. |
| **ನಿರ್ಣಯ** | | **ವಿಶ್ವವಿದ್ಯಾಲಯದಲ್ಲಿ ಸಂಚಿತ ವೇತನದ ಮೇಲೆ ಯುಸಿಕ್ ವಿಭಾಗ, ಕವಿವಿ ಮುದ್ರಣಾಲಯ, ಐಟಿ ವಿಭಾಗ, ಗ್ರಂಥಾಲಯ ಹಾಗೂ ಇತರೇ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರುಗಳಿಗೆ ನೀಡಲಾಗುತ್ತಿರುವ ವೇತನ ಒಂದೇ ರೀತಿಯಲ್ಲಿ ಇರುವುದಿಲ್ಲ. ವಿಶ್ವವಿದ್ಯಾಲಯದಲ್ಲಿ ಕಾರ್ಯನಿರ್ವಹಿಸುವ ಸಿ, ಡಿ, ಭದ್ರತಾ ಸಿಬ್ಬಂದಿಗಳು ಮತ್ತು ಸಫಾಯಿ ಕರ್ಮಚಾರಿಗಳು ಏಜೆನ್ಸಿ ಮೂಲಕ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ದೊರೆಯುತ್ತಿರುವ ಇಎಸ್ಐ ಹಾಗೂ ಪಿಎಫ್ ಸೌಲಭ್ಯಗಳು ಸಂಚಿತ ವೇತನ ಸಿಬ್ಬಂದಿಗಳಿಗೆ ದೊರೆಯುತ್ತಿಲ್ಲ. ಕಾರಣ, ಈ ಹಿಂದಿನ ಸಿಂಡಿಕೇಟ ಸಭೆಯ ನಿರ್ಣಯದಂತೆ, ಸಂಚಿತ ವೇತನದಡಿಯಲ್ಲಿರುವ ಸಿಬ್ಬಂದಿಗಳ ಸಂಖ್ಯೆಯನ್ನು ಅವಶ್ಯಕತೆ ಅನುಗುಣವಾಗಿ KTTP ನಿಯಮಾವಳಿಗಳ ಪ್ರಕಾರ ಸೇವೆಯನ್ನು ಪಡೆಯುವ ಷರತ್ತಿಗೊಳಪಟ್ಟು, ವಿಶ್ವವಿದ್ಯಾಲಯದ ಕಾರ್ಯಗಳನ್ನು ತೂಗಿಸುವ ದೃಷ್ಟಿಯಿಂದ ಸದರಿ ಸಿಬ್ಬಂದಿಗಳಿಗೆ ದಿನಾಂಕ. 31.10.2025ರ ವರೆಗೆ ವೇತನವನ್ನು ಮಂಜೂರು ಮಾಡಲು ಅನುಮೋದಿಸಲಾಗಿರುತ್ತದೆ.<br>ಆದ್ದರಿಂದ, ಅವಶ್ಯವಿರುವ ಸಿಬ್ಬಂದಿಗಳನ್ನು ಸಂಚಿತ ವೇತನದಿಂದ ಏಜೇನ್ಸಿ ಮೂಲಕ ಅವರ ಹುದೆಗಳಿಗೆ ತಕ್ಕಂತೆ ಪಿ.ಡ್ಲ್ಯೂ.ಡಿ ನಿಗದಿಪಡಿಸಿದ ವೇತವನ್ನು ಏಜೇನ್ಸಿ ಮೂಲಕ ನೀಡಲು ಅಧ್ಯಯನ ಮಾಡಲು ಹಣಕಾಸು ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಮತ್ತು ಡಾ. ಬಸವರಾಜ ಗೊರವರ, ಸಿಂಡಿಕೇಟ ಸದಸ್ಯರು ಹಾಗೂ ಡಾ. ಬಿ. ಎಲ್. ಗುಂಡೂರ, ಸಿಂಡಿಕೇಟ ಸದಸ್ಯರು ಇವರನ್ನೊಳಗೊಂಡ ಸಮಿತಿಯನ್ನು ರಚಿಸಿ ಒಂದು ವಾರದ ಒಳಗಾಗಿ ವರದಿ ನೀಡುವಂತೆ ಸಿಂಡಿಕೇಟ ನಿರ್ಣಯಿಸಿತು.** |



ಕುಲಸಚಿವರು

ಕುಲಪತಿಗಳು

Enclosure - Item no 29

C

| Karnatak University, Dharwad | | | | |
|---|---|---|---|---|
| ITEP B.Sc. B.Ed. and B.A. B.Ed. (Middle Stage) | | | | |
| Annual Fees structure for I year ITEP B.Sc. B.Ed, B.A. B.Ed. And B.Com B.Ed (Middle Stage) Course - 2025-2026 | | | | |
| Sl. No. | Fees Structure | B.A. B.Ed. Amount | B.Sc. B.Ed. Amount | B.Com. B.Ed. Amount |
| University Fees / ವಿಶ್ವವಿದ್ಯಾಲಯ ಶುಲ್ಕ | | | | |
| 1 | College Development Council Fund / ಕಾಲೇಜ ಡೆವ್ಹಲೊಪ್‌ಮೆಂಟ ಕೌನ್ಸಿಲ್ ಫಂಡ | 200 | 200 | 200 |
| 2 | K.U.E.I.G.B. (Career Guidance Service Fund) / ಯು.ಇ.ಐ.ಜಿ.ಬಿ. (ಕರಿಯರ ಗೈಡನ್ಸ ಸರ್ವಿಸ್ ಫಂಡ) | 250 | 250 | 250 |
| 3 | Sports Fees / ಸ್ಪೋರ್ಟ್ಸ ಫೀ | 750 | 750 | 750 |
| 4 | Sports Development Fund / ಸ್ಪೋರ್ಟ್ಸ ಡೆವ್ಹಲೊಪ್‌ಮೆಂಟ ಫಂಡ | 500 | 500 | 500 |
| 5 | Poor Students aid Fund / ಪೂರ ಸ್ಟೂಡಂಟ್ಸ ಏಡ್ ಫಂಡ | 200 | 200 | 200 |
| 6 | Youth Festival Fund / ಯುಥ್ ಫೆಸ್ಟಿವಲ್ ಫಂಡ | 500 | 500 | 500 |
| 7 | Karnatak University Student's Benefit Scheme (KUSBS) | 200 | 200 | 200 |
| 8 | Students Welfare Fund / ಸ್ಟೂಡಂಟ್ಸ್ ವೆಲ್‌ಫೇರ್ ಫಂಡ<br>College should return Rs. 5/- per candidate for students welfare activities<br>(ಮಹಾವಿದ್ಯಾಲಯಗಳು ಪ್ರತಿ ವಿದ್ಯಾರ್ಥಿಯ ರೂ. 5-00 ನ್ನು ವಿದ್ಯಾರ್ಥಿ ಕಲ್ಯಾಣ ಕಾರ್ಯಗಳಿಗಾಗಿ ನಿಧಿ ಎಂದು ಉಳಿಸಿಕೊಳ್ಳುವುದು. | 300 | 300 | 300 |
| 9 | K.U. Corpus Fund / ಕೆಯು ಕಾರ್ಪಸ್ ಫಂಡ | 500 | 500 | 500 |
| 10 | K.U.N.S.S Welfare Fund / ಕೆ.ಯು.ಎನ್.ಎಸ್.ಎಸ್. ವೆಲ್‌ಫೇರ್ ಫಂಡ | 200 | 200 | 200 |
| 11 | University Reg. Fees / ವಿಶ್ವವಿದ್ಯಾಲಯ ನೊಂದಣಿ ಶುಲ್ಕ | 6000 | 6000 | 6000 |
| 12 | University Alumni Fees / ವಿಶ್ವವಿದ್ಯಾಲಯ ಅಲ್ಯೂಮಿನೈ ಶುಲ್ಕ | 300 | 300 | 300 |
| **University Total Fees** | | **9900** | **9900** | **9900** |
| | | | | |
| College Fees / ಕಾಲೇಜು ಶುಲ್ಕ | | | | |
| 13 | Admission Fees / ಪ್ರವೇಶ ಶುಲ್ಕ | 200 | 200 | 200 |
| 14 | College Exam Fee / ಕಾಲೇಜು ಪರೀಕ್ಷಾ ಶುಲ್ಕ | 105 | 105 | 105 |
| 15 | Gymkhana / ಜಿಮಖಾನಾ | 105 | 105 | 105 |
| 16 | Cultural Activities / ಸಾಂಸ್ಕೃತಿಕ ಚಟುವಟಿಕೆಗಳು | 210 | 210 | 210 |
| 17 | Identity Card Fee / ಗುರುತಿನ ಚೀಟಿ | 100 | 100 | 100 |
| 18 | Library Fee / ಗ್ರಂಥಾಲಯ ಶುಲ್ಕ | 105 | 105 | 105 |
| 19 | Medical Exam Fee / ವೈದ್ಯಕೀಯ ಶುಲ್ಕ | 31 | 31 | 31 |
| 20 | Reading Room & Others / ಓದುವ ಕೊಠಡಿ | 74 | 74 | 74 |
| 21 | College Magazine / ಕಾಲೇಜು ಮ್ಯಾಗಜೀನ | 105 | 105 | 105 |
| 22 | Youth Red Cross / ಯುಥ್ ರೆಡ್ ಕ್ರಾಸ್ | 50 | 50 | 50 |
| 23 | Armed Forces / Other Flags / ಆರ್ಮಡ್ ಫೋರ್ಸ / ಇತರೆ ಫ್ಲಾಗ್ಸ | 20 | 20 | 20 |
| 24 | K.S.S.W. Fund / ಕೆ.ಎಸ್.ಎಸ್.ಡ್ಲ್ಯೂ ಫಂಢ | 25 | 25 | 25 |
| 25 | K.S.T.Benefit Fund (KST Welfare Fund) / ಕೆ.ಎಸ್.ಟಿ. ಬೇನಿಫಿಟ್ ಫಂಡ (ಕೆಎಸ್.ಟಿ. ವೆಲ್‌ಪೇರ್ ಫಂಡ) | 25 | 25 | 25 |
| 26 | NWTF (Teachers Benefit fund) / ಎನ್.ಡಬ್ಲ್ಯೂ.ಟಿ.ಎಫ್. (ಟೀಚರ್ಸ ಬೇನಿಫಿಟ್ ಫಂಡ) | 25 | 25 | 25 |

| | | | | |
|---|---|---|---|---|
| 27 | NSS Fees./ ಎನ್.ಎಸ್.ಎಸ್. ಶುಲ್ಕ | 30 | 30 | 30 |
| 28 | Bharat Scouts and Guides / ಭಾರತ ಸ್ಕೌಟ್ಸ ಮತ್ತು ಗೈಡ್ಸ | 50 | 50 | 50 |
| 29 | Lesson Plan and Other Records / ಪಾಠ ಯೋಜನೆ ಮತ್ತು ಇತರ ದಾಖಲೆಗಳ ಶುಲ್ಕ | 250 | 250 | 250 |
| 30 | Computer / ಕಂಪ್ಯೂಟರ | 500 | 500 | 500 |
| 31 | Art and Drawing / ಕಲೆ ಮತ್ತು ಚಿತ್ರಕಲೆ | 200 | 200 | 200 |
| 32 | SUPW (Socially Useful Productive Work) | 150 | 150 | 150 |
| 33 | Education Technology / ಶೈಕ್ಷಣಿಕ ತಂತ್ರಜ್ಞಾನ | 100 | 100 | 100 |
| 34 | Tuition Fees / ಭೋಧನಾ ಶುಲ್ಕ | 4000 | 4000 | 4000 |
| 35 | Laboratory / ಪ್ರಯೋಗಾಲಯ ಶುಲ್ಕ | -- | 2000 | 1000 |
| 36 | Eligibility Fees / ಅರ್ಹತಾ ಶುಲ್ಕ (ICSE / CBSE / Other Then Karnataka State) | -- | -- | -- |
| | | | | |
| | **.College Total Fees** | **6460** | **8460** | **7460** |
| | | | | |
| | **Grand Total** | **16360** | **18360** | **17360** |

Dy. Registrar
Academic Section
K.U. Dharwad.
24/11/25

## : ಭಿನ್ನಾಭಿಪ್ರಾಯ ಟಿಪ್ಪಣಿ :

ದಿನಾಂಕ 31-07-2025 ರಂದು ಜರುಗಿದ ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ 34 ರಲ್ಲಿ (ದಿನಾಂಕ 10.09.2025 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ತಿದ್ದುಪಡೆಗೊಂಡಿರುತ್ತದೆ) ಕರ್ನಾಟಕ ವಿಶ್ವವಿದ್ಯಾಲಯ/ ಕರ್ನಾಟಕ ಮಹಾವಿದ್ಯಾಲಯಗಳಿಗೆ ಸ್ನಾತಕ/ಸ್ನಾತಕೋತ್ತರ ಪದವಿಗಳಿಗೆ ಪೂರ್ಣಕಾಲಿಕ ಉಪನ್ಯಾಸಕರ ಹಾಗೂ ಅರೇಕಾಲಿಕ ಉಪನ್ಯಾಸಕರ ಸೇವೆ ಪಡೆಯಲು ಅರ್ಜಿ ಆಹ್ವಾನಿಸಿ ಸಂದರ್ಶನದ ಮೂಲಕ ಮೆರಿಟ್/ ರೋಸ್ಟರ ಅನುಗುಣವಾಗಿ ಮಾಡತಕ್ಕದ್ದು ಎಂದು ನಿರ್ಣಯಿಸಲಾಗಿರುತ್ತದೆ.

ಸದರಿ . ನಿರ್ಣಯದನ್ವಯವಾಗಿ ಸ್ನಾತಕ/ಸ್ನಾತಕೋತ್ತರ ಪದವಿಗಳಿಗೆ ಪೂರ್ಣಕಾಲಿಕ ಉಪನ್ಯಾಸಕರ ಹಾಗೂ ಅರೇಕಾಲಿಕ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆಯು ಈಗಾಗಲೇ ಪೂರ್ಣಗೊಂಡಿರುತ್ತದೆಂದು ತಿಳಿದುಬಂದಿದ್ದು. ಈ ಕೆಳಕಂಡ ನಿಯಮಾವಳಿಗಳು ಪಾಲನೆಯಾಗಿರುವುದಿಲ್ಲ.

- ಕರಾವಿ ಅಧಿನಿಯಮ-2000ರ ಪರಿಚ್ಛೇದ 53(3) ರಂತೆ ಕುಲಸಚಿವರನ್ನು ಸದಸ್ಯ ಕಾರ್ಯದರ್ಶಿಗಳೆಂದು ಪೂರ್ಣಕಾಲಿಕ ಉಪನ್ಯಾಸಕರ ಹಾಗೂ ಅರೇಕಾಲಿಕ ಉಪನ್ಯಾಸಕರ ಸಂದರ್ಶನಕ್ಕೆ ಆಹ್ವಾನಿಸಿರುವುದಿಲ್ಲ.
- ಪೂರ್ಣಕಾಲಿಕ ಉಪನ್ಯಾಸಕರ ಹಾಗೂ ಅರೇಕಾಲಿಕ ಉಪನ್ಯಾಸಕರ ನೇಮಕಾತಿಗೆ ಸಂಬಂಧಿಸಿದ ನಿಯಮಾವಳಿಗಳನ್ನು ಗೌರವಾನ್ವಿತ ಕುಲಾಧಿಪತಿಗಳು ಹಾಗೂ ಸರ್ಕಾರದಿಂದ ಅನುಮೋದನೆಯನ್ನು ಪಡೆದಿರುವುದಿಲ್ಲ.
- ವಿಭಾಗವಾರು ರೋಸ್ಟರ್ ನಿಯಮವನ್ನು ಪಾಲಿಸಿರುವುದಿಲ್ಲ.
- ನೇಮಕಾತಿ ಆದೇಶಗಳು ಸಕ್ಷಮ ಅಧಿಕಾರಿಯಿಂದ ಜಾರಿಯಾಗಿರುವುದಿಲ್ಲ.

ಮೇಲ್ಕಾಣಿಸಿದ ಅಂಶಗಳಂತೆ ಸ್ನಾತಕ/ಸ್ನಾತಕೋತ್ತರ ಪದವಿಗಳಿಗೆ ಪೂರ್ಣಕಾಲಿಕ ಉಪನ್ಯಾಸಕರ ಹಾಗೂ ಅರೇಕಾಲಿಕ ಉಪನ್ಯಾಸಕರ ನೇಮಕಾತಿ ಪ್ರಕ್ರಿಯೆಯು ಪ್ರಸ್ತುತ ನಿಯಮಾವಳಿಗಳ ಅನುಸಾರ ಜರುಗದೆ ಇರುವುದರಿಂದ, ದಿನಾಂಕ 31-07-2025 ರಂದು ಜರುಗಿದ ಸಿಂಡಿಕೇಟ ಸಭೆಯ ನಿರ್ಣಯ ಸಂಖ್ಯೆ 34ಕ್ಕೆ (ದಿನಾಂಕ 10.09.2025 ರಂದು ಜರುಗಿದ ಸಿಂಡಿಕೇಟ ಸಭೆಯಲ್ಲಿ ತಿದ್ದುಪಡೆಗೊಂಡಿರುತ್ತದೆ) ನನ್ನ ಭಿನ್ನಾಭಿಪ್ರಾಯ ಟಿಪ್ಪಣಿಯನ್ನು ಈ ಮೂಲಕ ಸಿಂಡಿಕೇಟ ಸಭೆಯ ಎಲ್ಲ ಸದಸ್ಯರ ಸಮ್ಮುಖದಲ್ಲಿ ವ್ಯಕ್ತಪಡಿಸಲಾಗಿದೆ.

ದಿನಾಂಕ: 05.11.2025

05/11/2025

ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು
ಸಿಂಡಿಕೇಟ, ಕ.ವಿ.ವಿ.ಧಾರವಾಡ